# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಚೇರಿ
ನಂ:29, ಚಾ.ವಿ.ಸ.ನಿ.ನಿ.,
ವಿಜಯನಗರ, 2ನೇ ಹಂತ, ಹಿನಕಲ್,
ಮೈಸೂರು-570 0107
CIN:U40109KA2004SGC035177
Website: WWW.cescmysore.org

ಕಚೇರಿ ವಿಳಾಸ
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಕೇಂದ್ರ ಉಪ – ವಿಭಾಗ,
ಎಂ.ಪಿ.ಎಲ್. ಕಟ್ಟಡ, ಶ್ರೀ ಹರ್ಷ ರಸ್ತೆ, ಮೈಸೂರು-570 001
Email ID: aeecz@cescmysore.org
ದೂರವಾಣಿ ಸಂಖ್ಯೆ: 0821-2421902


ಸ.ಕಾ.ನಿ.ಇಂ/ಕೇ.ಉ.ವಿ./ಸ.ಇಂ.(ತಾಂ)/17-18/ 3447-48    ದಿನಾಂಕ:- 18/09/2017

ದಿನಾಂಕ 13.09.2017 ರಂದು ಬೆಳಿಗ್ಗೆ 11.00 ಗಂಟೆಗೆ **ಅಧೀಕ್ಷಕ ಇಂಜಿನಿಯರ್(ವಿ),** ಕಾರ್ಯ ಮತ್ತು ಪಾಲನೆ ವೃತ್ತ, ಮೈಸೂರು, ರವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಉಪ ವಿಭಾಗ ವ್ಯಾಪ್ತಿಯ **ಜನ ಸಂಪರ್ಕ** ಸಭೆಯ ನಡಾವಳಿಗಳು

## ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ನೌಕರ ವರ್ಗದವರು

1. ಶ್ರೀ.ನರಸಿಂಹೇಗೌಡ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಮೈಸೂರು.
2. ಶ್ರೀ.ಸೋಮಶೇಖರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ವಿಭಾಗ. ಮೈಸೂರು.
3. ಶ್ರೀ.ಮಾದೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೇಂದ್ರ ಉಪ ವಿಭಾಗ. ಮೈಸೂರು.
4. ಶ್ರೀ.ರಾಚಯ್ಯ, ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಕೇಂದ್ರ ಉಪ ವಿಭಾಗ, ಮೈಸೂರು.
5. ಶ್ರೀ.ವಿಶ್ವಾಸ್.ಎಂ.ಆರ್, ಸಹಾಯಕ ಇಂಜಿನಿಯರ್(ವಿ),ತಾಂತ್ರಿಕ, ಕೇಂದ್ರ ಉಪ ವಿಭಾಗ, ಮೈಸೂರು.
6. ಶ್ರೀ.ಸುಕುಮಾರ ರಾಜು ಬಸವರಾಜು, ಸಹಾಯಕ ಇಂಜಿನಿಯರ್(ವಿ), ಮಂಡಿಮೊಹಲ್ಲಾ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
7. ಶ್ರೀಮತಿ. ಧರಣಿದೇವಿ ಸಹಾಯಕ ಇಂಜಿನಿಯರ್(ವಿ) ಎಂ.ಪಿ.ಎಲ್ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
8. ಶ್ರೀ.ರಾಘವೇಂದ್ರ, ಸಹಾಯಕ ಇಂಜಿನಿಯರ್(ವಿ), ರಮಾವಿಲಾಸ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
9. ಶ್ರೀ.ರಾಮಚಂದ್ರ, ಸಹಾಯಕ ಇಂಜಿನಿಯರ್(ವಿ), ಸಿದ್ದಾರ್ಥ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
10. ಶ್ರೀ.ಮಣಿಕಂಠ, ಸಹಾಯಕ ಇಂಜಿನಿಯರ್(ವಿ), ವರುಣಾ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
11. ಶ್ರೀ.ಮಾಧು, ಕಿರಿಯ ಇಂಜಿನಿಯರ್(ವಿ),ಮಂಡಿಮೊಹಲ್ಲಾ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
12. ಶ್ರೀ.ಸಿದ್ದರಾಜು ಕಿರಿಯ ಇಂಜಿನಿಯರ್(ವಿ), ಎಂ.ಪಿ.ಎಲ್ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
13. ಶ್ರೀ.ಅಕ್ಕಮಹದೇವಿ, ಕಿರಿಯಇಂಜಿನಿಯರ್(ವಿ), ರಮಾವಿಲಾಸ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
14. ಶ್ರೀ.ಅರುಣ್‌ಕುಮಾರ್, ಕಿರಿಯ ಇಂಜಿನಿಯರ್(ವಿ), ಸಿದ್ದಾರ್ಥ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
15. ಶ್ರೀ.ರವಿಕುಮಾರ್, ಕಿರಿಯ ಇಂಜಿನಿಯರ್(ವಿ), ಮೇಗಳಾಪುರ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.
16. ಶ್ರೀ.ಪ್ರಸನ್ನ ಕುಮಾರ್, ಹಿರಿಯ ಸಹಾಯಕ, ವರುಣಾ ಶಾಖೆ, ಕೇಂದ್ರ ಉಪ ವಿಭಾಗ, ಮೈಸೂರು.

DGM-Civil 11/10

AGM-AAY

ನಂ. 2152
ತಾ. 11/10/17

ಶ್ರೀ.ಮಾದೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೇಂದ್ರ ಉಪ ವಿಭಾಗ ರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರನ್ನು, ಗ್ರಾಮಪಂಚಾಯಿತಿ ಮುಖಂಡರನ್ನು, ರೈತ ಮುಖಂಡರನ್ನು, ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರಾದ ಅಧೀಕ್ಷಕ ಇಂಜಿನಿಯರ್(ವಿ), ರವರು ಸಭೆಯ ಮೂಲ ಉದ್ದೇಶವನ್ನು ತಿಳಿಸುತ್ತಾ ಗ್ರಾಹಕರು ಮತ್ತು ನಿಗಮದ ನಡುವೆ ಸೌಹಾರ್ದ ವಾತಾವರಣದಲ್ಲಿ ಸಮಸ್ಯೆಗಳ ಪರಿಹಾರ, ಗ್ರಾಹಕರ ಉತ್ತಮ ಸೇವೆ ನೀಡುವ ನಿಟ್ಟಿನಲ್ಲಿ ಕೆ.ಇ.ಆರ್.ಸಿ ನಿಯಾಮಾವಳಿಗಳ ಪ್ರಕಾರ ಈ ಸಭೆಯನ್ನು ಆಯೋಜಿಸಿದೆ ಎಂದು ಹಾಜರಿದ್ದ ಸಾರ್ವಜನಿಕರಿಗೆ ತಿಳಿಸಿದರು.

ಮುಂದುವರೆದು, ಈ ಹಿಂದೆ ದಿನಾಂಕ: 13.06.2017 ರಂದು ನಡೆದ ಜನ ಸಂಪರ್ಕ ಸಭೆಯಲ್ಲಿ ಬಂದ ದೂರುಗಳಿಗೆ ಕ್ರಮ ವಹಿಸಿರುವ ಸಂಬಂಧ ಎಲ್ಲಾ ಶಾಖಾಧಿಕಾರಿಗಳಿಗೆ ತಿಳಿಸಲಾಗಿ ಕ್ರಮ ಸಂಖ್ಯೆ 2,3,4,6,10,11,13, ಮತ್ತು 14 ವರೆಗೆ ಕ್ರಮ ವಹಿಸಿರುವುದಾಗಿ ಶಾಖಾಧಿಕಾರಿಗಳು ತಿಳಿಸುತ್ತಾ ಕ್ರಮ ಸಂಖ್ಯೆ 1,5,7,8,9 ಮತ್ತು 12 ಗಳು ಪ್ರಗತಿಯಲ್ಲಿರುವುದಾಗಿ ಶಾಖಾಧಿಕಾರಿಗಳು ತಿಳಿಸಿರುತ್ತಾರೆ. ಈ ಸಂಬಂಧ UNIP ಯೋಜನೆ ಅಡಿಯಲ್ಲಿ ಅಧಿಕ ಪರಿವರ್ತಕ ಅಳವಡಿಸಲು ತೆಗೆದುಕೊಂಡಿರುವ ಗುತ್ತಿಗೆದಾರರ ವಿಳಂಬ ನೀತಿಯಿಂದ ಪರಿವರ್ತಕ ಅಳವಡಿಸಲು ವಿಳಂಬವಾಗುತ್ತಿರುವುದಾಗಿ ತಿಳಿಸಿದ್ದರ ಮೇರೆಗೆ ಅಧೀಕ್ಷಕ ಇಂಜಿನಿಯರ್(ವಿ), ರವರು ಸಂಬಂಧಪಟ್ಟ ಗುತ್ತಿಗೆದಾರರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ತುರ್ತಾಗಿ ಕಾಮಗಾರಿ ಮಾಡುವಂತೆ ಸೂಚಿಸಿರುತ್ತಾರೆ. ನಂತರ ಹಾಜರಿದ್ದ ಗ್ರಾಹಕರಿಗೆ ಸಮಸ್ಯೆಗಳನ್ನು ತಿಳಿಸಲು ಅವಕಾಶವನ್ನು ನೀಡಿ ಸಭೆಯನ್ನು ಮುಂದುವರೆಸಲಾಯಿತು.

**ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.**

| ಕ್ರ.ಸಂ | ಅರ್ಜಿದಾರರ ಹೆಸರು ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಶ್ರೀ.ಜವರಪ್ಪ,<br>9535602984 | 1) ಜೆ.ಎಸ್.ಎಸ್ ಲೇ ಔಟ್ ನಗರದಲ್ಲಿ ನವಂಬರ್-2016 ರಲ್ಲಿ ವಿದ್ಯುತ್ ಅಪಘಾತವಾಗಿರುವ ಬಗ್ಗೆ ಚರ್ಚಿಸಿದರು.<br><br>2) ಭುಗತ್‌ಗಳ್ಳಿ ಸುತ್ತಮುತ್ತ ಪ್ರದೇಶಗಳಲ್ಲಿ | 1) ಅಧೀಕ್ಷಕ ಇಂಜಿನಿಯರ್(ವಿ), ರವರ ಸದರಿ ವಿದ್ಯುತ್ ಅಪಘಾತದ ಬಗ್ಗೆ ಇಲಾಖಾ ವತಿಯಿಂದ ಸೂಕ್ತ ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು.<br><br>2) ಸಹಾಯಕ ಕಾರ್ಯನಿರ್ವಾಹ |

| | | | |
|---|---|---|---|
| | | ನಿರಂತರ ವಿದ್ಯುತ್ ಕಾಮಗಾರಿ ಆಗಿಲ್ಲದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.<br><br>3) ವಸಂತ ನಗರ ಬಡಾವಣೆಯಲ್ಲಿ ಬೀದಿ ದೀಪಗಳು ನಿರಂತರವಾಗಿ ಉರಿಯುತ್ತಿರುವ ಬಗ್ಗೆ ಚರ್ಚೆ ಮಾಡಿದರು.<br><br>4) ನವಕೀಸ್ ಸ್ಕೂಲ್ ಆವರಣದಲ್ಲಿ ಹೈ ಟೆನ್ಷನ್ ತಂತಿ ಹಾದುಹೋಗಿದ್ದರು ಸಹ ವಿದ್ಯುತ್ ಸಂಪರ್ಕ ಕಲ್ಪಿಸಿರುವುದರ ಬಗ್ಗೆ ಚರ್ಚೆ ಮಾಡಿದರು.<br><br>5) ಚೋರನಹಳ್ಳಿ ರಸ್ತೆ ಚಿಕ್ಕಳ್ಳಿಯಲ್ಲಿ ಬಾರ್ ಗೆ ಲೈಸೆನ್ಸು ನೀಡದೆ ವಿದ್ಯುತ್ ಸಂಪರ್ಕವನ್ನು ಪುನರ್‌ಕಲ್ಪಿಸಿರುವುದಾಗಿ ತಿಳಿಸಿದರು. | ಇಂಜಿನಿಯರ್(ವಿ), ರವರು ಮಾತನಾಡಿ ಈಗಾಗಲೇ 24 ಗಂಟೆ ವಿದ್ಯುತ್ ಸರಬರಾಜು ಕಲ್ಪಿಸಿರುವುದಾಗಿ ತಿಳಿಸಿರುತ್ತಾರೆ.<br><br>3)ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ), ರವರು, ಬೀದಿ ದೀಪಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರುವುದರಿಂದ ಅಲ್ಲಿಯ ಅಧಿಕಾರಿಗಳನ್ನು ಸಂಪರ್ಕಿಸಿ ಬಗೆ ಹರಿಸುವುದಾಗಿ ತಿಳಿಸಿದರು.<br><br>4) ಅಧೀಕ್ಷಕ ಇಂಜಿನಿಯರ್(ವಿ), ರವರು, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಕ.ವಿಪ್ರನಿನಿಯ ಅಧಿಕಾರಿಗಳನ್ನು ಸಂಪರ್ಕಿಸಿ ಕೆ.ಇ.ಆರ್.ಸಿ ನಿಯಮಾವಳಿಯ ಪ್ರಕಾರ ಅಗತ್ಯ ಇರುವ ಅಂತರವನ್ನು ಖಚಿತ ಪಡಿಸಿಕೊಳ್ಳುವಂತೆ ಸೂಚಿಸಿದರು.<br><br>5) ಅಧೀಕ್ಷಕ ಇಂಜಿನಿಯರ್(ವಿ), ರವರು ಈ ಸಂಬಂಧ ಸಹಾಯಕ ಇಂಜಿನಿಯರ್(ವಿ), ವರುಣ ಶಾಖೆ ರವರಿಗೆ ವಿದ್ಯುತ್ ಪುನರ್ ಕಲ್ಪಿಸಿರುವುದಕ್ಕೆ ತೆಗೆದುಕೊಂಡಿರುವ ದಾಖಲಾತಿಗಳ ವಿವರವನ್ನು ನೀಡುವಂತೆ ಸೂಚಿಸಿದರು. |
| 2 | ಸ್ವಾಮಿ, ಬಡಗಲಹುಂಡಿ<br>9480363545 | ಸ್ವಾಮಿರವರು ಮಾತನಾಡಿ ಸರ್ವೆನಂ ಜಮೀನನ್ನು ಭೂ ಪರಿವರ್ತನೆ ಮಾಡುತ್ತಿರುವುದಾಗಿ ಹಾಗೂ ಸದರಿ ಜಮೀನಿನಲ್ಲಿ ಹಾದು ಹೋಗಿರುವ 11 ಕೆವಿ ಮಾರ್ಗದ 3 ಸಂಖ್ಯೆಯ ಕಂಬಗಳನ್ನು ಸ್ಥಳಾಂತರ ಮಾಡಿಕೊಡುವಂತೆ ಕೋರಿದರು. | ಈ ಬಗ್ಗೆ ಅಧೀಕ್ಷಕ ಇಂಜಿನಿಯರ್(ವಿ), ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಛೇರಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಸ್ವಂತ ಖರ್ಚಿನಲ್ಲಿ ಕಂಬ ಸ್ಥಳಾಂತರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| 3 | ಶ್ರೀ.ಅಪ್ಪುಗೌಡ,<br>ಸಿದ್ಧಾರ್ಥನಗರ<br>ಕುರುಬಾರಹಳ್ಳಿ,<br>ಮೈಸೂರು<br>9448753607 | ಶ್ರೀ.ಅಪ್ಪುಗೌಡ, ಸಿದ್ದಾರ್ಥನಗರ ಕುರುಬಾರಹಳ್ಳಿ, ರವರು ಮಾತನಾಡಿ ಸಿದ್ದಾರ್ಥ ಪೋಲೀಸ್ ಸ್ಟೇಷನ್ ಬಳಿ ವಿದ್ಯುತ್ ಕಂಬ ದುರಸ್ತಿಗೊಂಡಿದ್ದು ಬದಲಾಯಿಸಿಕೊಡುವಂತೆ. ಕೋರಿದರು. | ಅಧೀಕ್ಷಕ ಇಂಜಿನಿಯರ್(ವಿ), ರವರು ಉತ್ತರಿಸುತ್ತಾ ವಿದ್ಯುತ್ ಕಂಬವನ್ನು ತಕ್ಷಣವೇ ಬದಲಾಯಿಸುವಂತೆ ಸಹಾಯಕ ಇಂಜಿನಿಯರ್(ವಿ), ಸಿದ್ಧಾರ್ಥನಗರ ಶಾಖೆ ರವರಿಗೆ ನಿರ್ದೇಶನ ನೀಡಿದರು. |

ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಸಭಾಧ್ಯಾಕ್ಷರು ವಂದನೆಯನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೇಂದ್ರ ಉಪವಿಭಾಗ ಮೈಸೂರು ರವರ ಮೆಮೊ ನಂ:
ಸ.ಕಾ.ನಿ.ಇಂ/ಕೇ.ಉ.ವಿ./ಸ.ಇಂ.(ತಾಂ)/------- ದಿನಾಂಕ--------

18/09

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸಾ.ನಿ.ನಿ, ಕೇಂದ್ರ ಉಪವಿಭಾಗ,
ಮೈಸೂರು.

<u>ಪ್ರತಿಯನ್ನು</u>

1. ಪ್ರದಾನ ವ್ಯವಸ್ಥಾಪಕರು, (ವಾಣಿಜ್ಯ)/ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾ.ವಿ.ಸ.ನಿ.ನಿ ನಿಗಮ ಕಛೇರಿ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾ.ವಿ.ಸ.ನಿ.ನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಎನ್.ಆರ್.ಮೊಹಲ್ಲಾ, ಚಾವಿಸನಿನಿ, ಮೈಸೂರುರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ಸಹಾಯಕ ಇಂಜಿನಿಯರ್(ವಿ),/ಮಂಡಿಮೊಹಲ್ಲಾ ಶಾಖೆ/ಎಂ.ಪಿ.ಎಲ್ ಶಾಖೆ/ರಮಾವಿಲಾಸ ಶಾಖೆ/ಸಿದ್ದಾರ್ಥನಗರ ಶಾಖೆ/ವರುಣಾ ಶಾಖೆ/ಮೇಗಳಾಪುರ ಶಾಖೆ ಮೈಸೂರು ರವರಿಗೆಮಾಹಿತಿಗಾಗಿ ಹಾಗೂ ಸೂಕ್ತ ಕ್ರಮ ವಹಿಸಿ ಸಮಸ್ಯೆಗಳನ್ನು ಬಗೆಹರಿಸಿದ ಸಂಬಂಧ ಅನುಪಾಲನಾ ವರದಿ ಸಲ್ಲಿಸಲು.
5. ಸಹಾಯಕ ಇಂಜಿನಿಯರ್(ತಾಂ), ಕೇಂದ್ರ ಉಪ ವಿಭಾಗ, ಮೈಸೂರು ರವರ ಮಾಹಿತಿಗಾಗಿ ಹಾಗೂ ಅನುಸರಣಾ ಕ್ರಮಕ್ಕಾಗಿ
6. ಕಛೇರಿ ಪ್ರತಿ